# ವಾಟ್ಸ್‌ಆ್ಯಪ್; ಮತ್ತೆ ಅವತಾರ್

■ ಶಶಿಕುಮಾರ್ ಸಿ




ಮೆಸೇಜ್ ಯುವರ್‌ಸೆಲ್ಫ್, ಡೆಸ್ಕ್‌ಟಾಪ್ ಸ್ಕ್ರೀನ್‌ಲಾಕ್, ಲಿಂಕ್ ವಿಥ್ ಯುವರ್ ಫೋನ್, ಪೋಲ್ ಫೀಚರ್‌ಗಳನ್ನು ಈಚೆಗಷ್ಟೇ ಪರಿಚಯಿಸಿದ್ದ ವಾಟ್ಸ್‌ಆ್ಯಪ್, ಅವತಾರ್ ಫೀಚರ್ ಪರಿಚಯಿಸಿದೆ. ಈ ಫೀಚರ್ ಬಳಸಿಕೊಂಡು 36 ಕಸ್ಟಮ್ ಸ್ಟಿಕ್ಕರ್‌ಗಳನ್ನು ರಚಿಸಬಹುದು.

ಎಲ್ಲ ವಯೋಮಾನದವರೂ ವಾಟ್ಸ್‌ಆ್ಯಪ್‌ಗೆ ಅಡಿಕ್ಟ್ ಆಗಿರುವ ಈ ಕಾಲಘಟ್ಟದಲ್ಲಿ ತಮ್ಮೊಳಗಿನ ಭಾವನೆಗಳನ್ನು ವ್ಯಕ್ತಪಡಿಸಲು ಇಮೋಜಿಗಳನ್ನು ಬಳಸುತ್ತಿದ್ದರು. ಇಮೋಜಿಗಳ ಜೊತೆಗೆ ಸ್ಟಿಕರ್‌ಗಳನ್ನು ವಾಟ್ಸ್‌ಆ್ಯಪ್ ಪರಿಚಯಿಸಿದೆ. ಈ ಹಿಂದೆಯೂ ಸ್ಟಿಕ್ಕರ್‌ಗಳನ್ನು ವಾಟ್ಸ್‌ಆ್ಯಪ್ ಪರಿಚಯಿಸಿತ್ತು. ಅದರ ಅಪ್‌ಗ್ರೇಡ್ ವರ್ಷನ್ ಅನ್ನು ಈಚೆಗೆ ಬಿಡುಗಡೆ ಮಾಡಿದೆ.

ವಾಟ್ಸ್‌ಆ್ಯಪಿಗರ ಭಾವನೆಗಳು ಮತ್ತು ಕ್ರಿಯೆಗಳನ್ನು ಸ್ಟಿಕ್ಕರ್‌ಗಳ ಮೂಲಕ ವ್ಯಕ್ತಪಡಿಸಲು 'ಅವತಾರ್' ಫೀಚರ್ ನೆರವಾಗಿದೆ. ನಿಮ್ಮ ನೈಜ ಫೋಟೊವನ್ನು ಬಳಸದೆಯೇ, ನಿಮ್ಮನ್ನು ಹೋಲುವಂತಹ ಅವತಾರ್ ಫೋಟೊವನ್ನು ಈ ಫೀಚರ್ ಮೂಲಕ ಕ್ರಿಯೇಟ್ ಮಾಡಬಹುದು. ಅದನ್ನು ವಾಟ್ಸ್‌ಆ್ಯಪ್‌ನಲ್ಲಿ ಬೇರೆಯವರಿಗೆ ಕಳುಹಿಸಬಹುದು. ಹೀಗೆ ಮಾಡುವುದರ ಮೂಲಕ ನೀವೂ ಮೋಜಿನ ಭಾಗವಾಗಬಹುದು.

ಅವತಾರ್‌ನಲ್ಲಿ ರಚಿಸಿದ ಸ್ಟಿಕ್ಕರ್‌ಗಳನ್ನು ಫೋಟೊ, ವಿಡಿಯೊ ಹಾಗೂ ಫೈಲ್‌ಗಳನ್ನು ಕಳುಹಿಸುವಂತೆಯೇ ಶೇರ್ ಮಾಡಬಹುದು. ಅವತಾರ್‌ನಲ್ಲಿ ರಚಿಸಿದ ಸ್ಟಿಕ್ಕರ್ ಅನ್ನು ಪ್ರೊಫೈಲ್ ಚಿತ್ರವನ್ನಾಗಿಯೂ ಬಳಸಲು ವಾಟ್ಸ್‌ಆ್ಯಪ್ ಅವಕಾಶ ಕಲ್ಪಿಸಿದೆ.

ಈ ಹೊಸ ಅವತಾರ್ ಫೀಚರ್‌ನಲ್ಲಿ ಲೈಟಿಂಗ್, ಶೇಡಿಂಗ್, ಹೇರ್ ಸ್ಟೈಲ್ ಟೆಕ್ಸ್ಚರ್‌ಗಳು ಮತ್ತು ಹೆಚ್ಚಿನ ಆಯ್ಕೆಯಲ್ಲಿ ಬಳಕೆದಾರರು ತಮ್ಮ ಇಷ್ಟದ ಶೈಲಿಯಲ್ಲಿ ಸ್ಟಿಕ್ಕರ್‌ಗಳನ್ನು ರಚಿಸಬಹುದು. ಪ್ರಸ್ತುತ ಈ ರೀತಿಯಾಗಿ 36 ಕಸ್ಟಮ್ ಸ್ಟಿಕ್ಕರ್‌ಗಳನ್ನು ರಚಿಸಲು ಸಾಧ್ಯವಿದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಕಸ್ಟಮ್ ಅವತಾರ್ ಸ್ಟಿಕ್ಕರ್‌ಗಳನ್ನು ಪರಿಚಯಿಸಲಾಗುವುದು ಎಂದು ವಾಟ್ಸ್‌ಆ್ಯಪ್ ಬೀಟಾ ಇನ್ಫೋ ವರದಿ ಮಾಡಿದೆ.

## ಬಳಕೆ ಹೇಗೆ?

ಆ್ಯಪ್ ತೆರೆದು ಸ್ಟಿಕ್ಕರ್‌ಗಳ ವಿಭಾಗಕ್ಕೆ ಹೋಗಿ ಬಳಕೆದಾರರು ತಮ್ಮದೇ ಡಿಜಿಟಲ್ ಅವತಾರವನ್ನು ರಚಿಸಿಕೊಳ್ಳಬಹುದು. ಐಒಎಸ್‌ನಲ್ಲಿ ವಾಟ್ಸ್‌ಆ್ಯಪ್ ಚಾಟ್ ಓಪನ್ ಮಾಡಿ ಸ್ಟಿಕ್ಕರ್ಸ್ ಆಯ್ಕೆ ಕ್ಲಿಕ್ಕಿಸಿ ಅಲ್ಲಿ ಹೊಸದಾಗಿ ಅವತಾರ್ ರಚಿಸಬಹುದು. ಆದರೆ ಆ್ಯಂಡ್ರಾಯ್ಡ್‌ನಲ್ಲಿ ವಾಟ್ಸ್‌ಆ್ಯಪ್ ಚಾಟ್‌ನಲ್ಲಿ ಕಾಣುವ ಇಮೋಜಿ ಸಿಂಬಲ್ ಅನ್ನು ಟ್ಯಾಪ್ ಮಾಡಿ. ಕೆಳಭಾಗದಲ್ಲಿ ಇಮೋಜಿ, ಜಿಫ್ ಹಾಗೂ ಸ್ಟಿಕ್ಕರ್ ಫೀಚರ್‌ನ ಸಿಂಬಲ್ ಕಾಣುತ್ತದೆ. ಅದರಲ್ಲಿ ಸ್ಟಿಕ್ಕರ್ ಆಯ್ಕೆಯನ್ನು ಕ್ಲಿಕ್ಕಿಸಿದೊಡನೆ ಇನ್‌ಬಿಲ್ಟ್ ರೂಪದ ಹಲವು ಸ್ಟಿಕ್ಕರ್‌ಗಳು ತೆರೆದುಕೊಳ್ಳುತ್ತವೆ. ಸ್ಕ್ರೀನ್ ಮೇಲೆ ಕಾಣುವ ಪ್ಲಸ್ ಆಯ್ಕೆಯನ್ನು ಕ್ಲಿಕ್ಕಿಸಿ ನಿಮ್ಮ ಹೊಸ ಅವತಾರ್ ಅನ್ನು ರಚಿಸಿಕೊಳ್ಳಬಹುದು.

ನಿಮ್ಮ ಮೊಬೈಲ್‌ನಲ್ಲಿ ಅವತಾರ್ ಫೀಚರ್ ಇಲ್ಲವಾದಲ್ಲಿ, ವಾಟ್ಸ್‌ಆ್ಯಪ್ ಅನ್ನು ಇತ್ತೀಚಿನ ಆವೃತ್ತಿಗೆ ಅಪ್‌ಡೇಟ್ ಮಾಡಿಕೊಳ್ಳಿ. ನಂತರ 'ಅವತಾರ್' ಟ್ಯಾಪ್ ಮಾಡಿದರೆ ಹೊಸ ಪುಟವೊಂದು ತೆರೆದುಕೊಳ್ಳುತ್ತದೆ. ಅಲ್ಲಿ 'ಗೆಟ್ ಸ್ಟಾರ್ಟೆಡ್' ಆಯ್ಕೆ ಕ್ಲಿಕ್ ಮಾಡುವ ಮೂಲಕ 'ಅವತಾರ್' ಸ್ಟಿಕ್ಕರ್ ರಚಿಸಬಹುದು. ಒಮ್ಮೆ ಸ್ಟಿಕ್ಕರ್ ರಚಿಸಿದ ನಂತರ ಅದನ್ನು ಸೇವ್ ಮಾಡಬಹುದು, ಬೇಡವೆಂದರೆ ಅದನ್ನು ಡಿಲೀಟ್ ಸಹ ಮಾಡಬಹುದು. ■




## ಟ್ವಿಟರ್; ಬಂತು ಬ್ಲೂ ವೆರಿಫೈ

ಟ್ವಿಟರ್‌ನ ಬಹುನಿರೀಕ್ಷಿತ ಫೀಚರ್ ಬ್ಲೂ ವೆರಿಫೈ ಅಂತೂ ಚಾಲ್ತಿಗೆ ಬಂದೇಬಿಟ್ಟಿದೆ. ಟ್ವಿಟರ್ ಅನ್ನು ವಸುಪರ್ದಿಗೆ ತೆಗೆದುಕೊಂಡ ನಂತರ ಎಲಾನ್ ಮಸ್ಕ್ ಬ್ಲೂ ವೆರಿಫೈ ಬಗ್ಗೆ ಹೆಚ್ಚು ಉತ್ಸುಕರಾಗಿದ್ದರು. ಕಡೆಗೂ ಬ್ಲೂ ವೆರಿಫೈ ಅನ್ನು ಚಾಲ್ತಿಗೆ ತಂದಿದ್ದಾರೆ. ಅದೂ ಐಫೋನ್ ಬಳಕೆದಾರರಿಗೆ ಮಾತ್ರ.

ಮೊದಲ ಹಂತವಾಗಿ ಐಫೋನ್ ಬಳಕೆದಾರರಿಗೆ ಮಾತ್ರ ಈ ಸೌಲಭ್ಯವನ್ನು ಟ್ವಿಟರ್ ಒದಗಿಸಿದೆ. ಟ್ವಿಟರ್ ಖಾತೆದಾರರು ತಿಂಗಳ ಚಂದಾದಾರಿಕೆ ಆಧಾರದ ಮೇಲೆ ನಿಗದಿತ ಶುಲ್ಕ ಪಾವತಿಸಿ ಬ್ಲೂ ವೆರಿಫೈ ಬ್ಯಾಡ್ಜ್ ಬಳಸಬಹುದು. ಈ ಸೇವೆ ಪಡೆಯಲು ಅಮೆರಿಕದಲ್ಲಿ ತಿಂಗಳಿಗೆ 8 ಡಾಲರ್ ಪಾವತಿಸಬೇಕಿದ್ದು, ಭಾರತದಲ್ಲಿ ಆ ಬಗ್ಗೆ ಇನ್ನೂ ಮಾಹಿತಿ ಲಭ್ಯವಿಲ್ಲ.

ಟ್ವಿಟರ್ ಭವಿಷ್ಯದಲ್ಲಿ ವರ್ಣರಂಜಿತವಾಗಲಿದೆ. ಬ್ಲೂ ವೆರಿಫೈ ಜೊತೆಗೆ ಚಿನ್ನದ ಬಣ್ಣ ಹಾಗೂ ಬೂದು ಬಣ್ಣದ ವೆರಿಫೈ ಸಿಂಬಲ್ ಸಹ ಭವಿಷ್ಯದಲ್ಲಿ ಲಭ್ಯವಾಗಲಿದೆ. ಈ ಬಗ್ಗೆ ಮೈಕ್ರೊ ಬ್ಲಾಗಿಂಗ್ ಸೈಟ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಎಲಾನ್ ಮಸ್ಕ್, 'ಟ್ವಿಟರ್ ಖಾತೆ ಪರಿಶೀಲನೆಯ ಪ್ರಕ್ರಿಯೆ ಬಹುತೇಕ ಮುಕ್ತಾಯಗೊಂಡಿದೆ. ಕಂಪನಿಗಳು ಬಳಸುವ ಖಾತೆಗೆ ಚಿನ್ನದ ಬಣ್ಣದ ಸಿಂಬಲ್, ಸರ್ಕಾರಗಳು ಬಳಸುವ ಖಾತೆಗೆ ಬೂದು ಬಣ್ಣದ ಸಿಂಬಲ್ ಹಾಗೂ ವ್ಯಕ್ತಿಗಳಿಗೆ (ಸೆಲೆಬ್ರಿಟಿ ಅಥವಾ ಇಲ್ಲದಿರಲಿ) ನೀಲಿ ಬಣ್ಣದ ಸಿಂಬಲ್ ನೀಡಲಾಗುತ್ತದೆ' ಎಂದಿದ್ದಾರೆ. ■